AJIMS E/RC/ JNT/CTN/ 391/2018 - 5/10/18


**ಸಹಾಯಕ ನಿರ್ದೇಶಕರ ಕಛೇರಿ ( ಗ್ರೇಡ್-1) ಸಮಾಜ ಕಲ್ಯಾಣ ಇಲಾಖೆ**

**ಮಂಗಳೂರು ತಾಲೂಕು, ರಸಿಕ್ ಚೇಂಬರ್ 3ನೇ ಮಹಡಿ ಸೆಂಟ್ರಲ್ ಮಾರ್ಕೆಟ್ ರೋಡ್**

**ಮಂಗಳೂರು-575001 ದೂರವಾಣಿ ಸಂಖ್ಯೆ:0824-2441269 / 2423619**

**E-mail:tswomanglore@gmail.com**


========================================================================

ಸಂ:ಸನಿ:ಭಾಸವಿವೇ:ಸಿಆರ್15 :18-19 ದಿ:20-09-2018

ರಿಗೆ,

ಪ್ರಾಂಶುಪಾಲರು,

________________

________________

ದ.ಕ ಮಂಗಳೂರು.

ಮಾನ್ಯರೇ,

ವಿಷಯ:2018-19ನೇ ಸಾಲಿನ ಕಾಲೇಜಿನಲ್ಲಿ ವ್ಯಾಸಾಂಗ ಮಾಡುತ್ತಿರುವ **ಮೆಟ್ರಿಕ್ ನಂತರದ ಪ:ಜಾತಿ ನವೀಕರಣ ವಿದ್ಯಾರ್ಥಿಗಳು SMIS PORTAL ಮೂಲಕ ಆನ್ ಲೈನ್ ನೋಂದಣಿ (Student Login)** ಮಾಡುವ ಬಗ್ಗೆ.

ಉಲ್ಲೇಖ: ಸಂ:ಸಕನಿ:ಇಡಿ-3ಸಿಆರ್-24/2018-19. ದಿನಾಂಕ:15-09-2018.

********

ಉಲ್ಲೇಖದ ಸುತ್ತೋಲೆಯಂತೆ, ಹೆತ್ತವರ ಆದಾಯ ಮಿತಿ 2.50 ಲಕ್ಷದೊಳಗೆ ಇರುವ ಪ:ಜಾತಿ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 2018-19 ನೇ ಸಾಲಿಗಾಗಿ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ನವೀಕರಣ ಅರ್ಜಿಗಳನ್ನು ಆನ್ ಲೈನ್ ಮೂಲಕ ಭರ್ತಿಮಾಡಿ ಅರ್ಜಿಯ ಹಾರ್ಡ್‌ಕಾಪಿಯನ್ನು ಹಾಗೂ ಪೂರಕ ದಾಖಲೆಗಳನ್ನು ಪ್ರಾಂಶುಪಾಲರು ದೃಢೀಕರಿಸಿ, ಬಂದ ಅರ್ಜಿಗಳನ್ನು ತಮ್ಮ ಹಂತದಲ್ಲಿ ಕ್ರೋಢೀಕರಿಸಿ ಈ ಕಚೇರಿಗೆ ಸಲ್ಲಿಸಬೇಕಾಗಿರತ್ತದೆ.

ಮುಂದುವರೆದು, ವಿದ್ಯಾರ್ಥಿವೇತನದಲ್ಲಿ ಕಾಲೇಜು ಶುಲ್ಕವನ್ನು ಪ್ರಾಂಶುಪಾಲರ ಖಾತೆಗೆ ಜಮೆ ಮಾಡಬೇಕಾಗಿರುವುದರಿಂದ ವಿದ್ಯಾರ್ಥಿಗಳ ಅರ್ಜಿ ಸ್ಥಿತಿಯನ್ನು ಪರಿಶೀಲಿಸಲು ಕಾಲೇಜಿನ (E-Mail-Id) ಹಾಗೂ ಪ್ರಾಂಶುಪಾಲರ ಬ್ಯಾಂಕ್ ಖಾತೆಯ ಜೆರಾಕ್ಸ್ ಪ್ರತಿಯನ್ನು ಪತ್ರ ಮುಖೇನ ಈ ಕಚೇರಿಗೆ ಕಳುಹಿಸಿಕೊಡಬೇಕಾಗಿರುತ್ತದೆ.

ಈ ವಿಷಯದ ಬಗ್ಗೆ ಹೆಚ್ಚಿನ ಗಮನ ಹರಿಸಿ ವಿದ್ಯಾರ್ಥಿ ವೇತನ ಮಂಜೂರು ಮಾಡಲು ಸಹಕರಿಸಬೇಕಾಗಿ ಕೋರಿದೆ

ಅಡಕ: ಪ್ರಕಟಣೆ

ತಮ್ಮ ವಿಶ್ವಾಸಿ,

ಸಹಾಯಕ ನಿರ್ದೇಶಕರು, ಗ್ರೇಡ್-1
ಸಮಾಜ ಕಲ್ಯಾಣ ಇಲಾಖೆ,
ಮಂಗಳೂರು.

ಪ್ರತಿ: ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ದ.ಕ ಮಂಗಳೂರು. ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಸಹಾಯಕ ನಿರ್ದೇಶಕರ ಕಛೇರಿ ( ಗ್ರೇಡ್-1) ಸಮಾಜ ಕಲ್ಯಾಣ ಇಲಾಖೆ
ಮಂಗಳೂರು ತಾಲೂಕು, ರಸಿಕ್ ಚೇಂಬರ್ 3ನೇ ಮಹಡಿ ಸೆಂಟ್ರಲ್ ಮಾರ್ಕೆಟ್ ರೋಡ್
ಮಂಗಳೂರು-575001 ದೂರವಾಣಿ ಸಂಖ್ಯೆ:0824-2441269 / 2423619
E-mail:tswomanglore@gmail.com

=========================================================

ಸಂ:ಸನಿ:ಭಾಸವಿವೇ:ಸಿಆರ್15 :18-19 ದಿ:20-09-2018

## ಪ್ರಕಟಣೆ

ವಿಷಯ: 2018-19ನೇ ಸಾಲಿಗೆ ಪ:ಜಾತಿ ನವೀಕರಣ ವಿದ್ಯಾರ್ಥಿಗಳು SMIS PORTAL ಮೂಲಕ ಆನ್ ಲೈನ್ ನೋಂದಣಿ (Student Login) ಮಾಡುವ ಬಗ್ಗೆ.

ಉಲ್ಲೇಖ: ಆಯುಕ್ತಕರು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಂಸಕನಿ:ಇಡಿ-3ಸಿಆರ್-24/2018-19. ದಿನಾಂಕ:15-09-2018.

*********

2018-19ನೇ ಸಾಲಿಗೆ ಪ:ಜಾತಿ ಮೆಟ್ರಿಕ್ ನಂತರದ ನವೀಕರಣ ವಿದ್ಯಾರ್ಥಿಗಳ ಮಂಜೂರಾತಿಗೆ ((ಹೆತ್ತವರ ಅದಾಯ ಮಿತಿ ರೂ.2.50 ಲಕ್ಷದೊಳಗೆ ಇರುವವರಿಗೆ)ಅರ್ಜಿ ಸಲ್ಲಿಸಲು ಈ ಕೆಳ ಕಾಣಿಸಿದ ಕ್ರಮಗಳನ್ನು ಅನುಸರಿಸ ಬೇಕಾಗಿರುತ್ತದೆ.

**ನವೀಕರಣ (Renewal):** ವಿದ್ಯಾರ್ಥಿಗಳು ಅನ್ ಲೈನ್ ಮೂಲಕ (www.sw.kar.nic.in)Student Login ನಲ್ಲಿ ಅವರ ರಿಜಿಸ್ಟ್ರೇಷನ್ ನಂಬ್ರವನ್ನು User ID ಯಾಗಿ ಮತ್ತು ಅವರ ಜನ್ಮ ದಿನಾಂಕವನ್ನು (dd/mm/yyyy) Pass word ಆಗಿ ಉಪಯೋಗಿಸಿ ನಂತರ (Renewal Post Metric) Scholarship ನ್ನು ಕ್ಲಿಕ್ ಮಾಡಿ ಅರ್ಜಿಯನ್ನು ಭರ್ತಿ ಮಾಡಿ ಅದರ ಪ್ರಿಂಟ್‌ನ್ನು ಪಡೆದು ಅದರೊಂದಿಗೆ ಈ ಕೆಳಗಿನ ದಾಖಲೆಗಳನ್ನು ಲಗತ್ತೀಸಿ ಸಂಬಂಧಿಸಿದ ಕಾಲೇಜು ಪ್ರಾಂಶುಪಾಲರ ಮೂಲಕ ದೃಡೀಕರಿಸಿ ದಿನಾಂಕ 30-11-2018ರ ಒಳಗಾಗಿ ಸಹಾಯಕ ನಿರ್ದೇಶಕರು ಗ್ರೇಡ್-1 ಇವರ ಕಛೇರಿಗೆ ಸಲ್ಲಿಸುವುದು.

1. ಆಧಾರ್ ಕಾರ್ಡ್
2. ಹಿಂದಿನ ವರ್ಷದ ಅಂಕ ಪಟ್ಟಿ
3. ಜಾತಿ ಪ್ರಮಾಣ ಪತ್ರ (ಕಡ್ಡಾಯವಾಗಿ RD003xxxxxxxxxx ನಂಬ್ರ ಹೊಂದಿರುವ)
4. ಆದಾಯ ಪ್ರಮಾಣ ಪತ್ರ (ಕಡ್ಡಾಯವಾಗಿ RD003xxxxxxxxxx ನಂಬ್ರ ಹೊಂದಿರುವ)
5. ಕಾಲೇಜು ಶುಲ್ಕದ ರಶೀದಿ
6. ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ(ಬ್ಯಾಂಕ್ ಖಾತೆ ವಿದ್ಯಾರ್ಥಿಗಳ ಹೆಸರಿನಲ್ಲಿ ಇರಬೇಕು ಮತ್ತು ಖಾತೆ ಚಾಲ್ತಿಯಲ್ಲಿರಬೇಕು.
7. ಕೌನ್ಸಿಲಿಂಗ್ ಆಡ್ಮಿಷನ್ ಕಾರ್ಡ್(ಇಂಜಿನಿಯರಿಂಗ್, ಮೆಡಿಕಲ್ ಮತ್ತು ಇನ್ನಿತರ ವೃತ್ತಿಪರ ಕೋರ್ಸಿನವರು)
8. ವಿದ್ಯಾರ್ಥಿಗಳ ಹೆತ್ತವರು ಸರ್ಕಾರಿ / ಅರೆ ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅರ್ಜಿ ಸಲ್ಲಿಸುವಾಗಿನ ಕೊನೆಯ ತಿಂಗಳ ವೇತನದ ದೃಡ ಪತ್ರ
9. ವಿದ್ಯಾರ್ಥಿಗಳ ಹೆತ್ತವರು ನಿವೃತ್ತಿ ಹೊಂದಿದ್ದಲ್ಲಿ ನಿವೃತ್ತಿ ವೇತನ ಜಮೆಯಾಗುವ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ಪ್ರತಿ.

ಹೆಚ್ಚಿನ ಮಾಹಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಾಯಕ ನಿರ್ದೇಶಕರು, ಗ್ರೇಡ್-1
ಸಮಾಜ ಕಲ್ಯಾಣ ಇಲಾಖೆ,
ಮಂಗಳೂರು.